# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80, Email:souharda@souharda.coop


**ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಅ–02/2018–19** **ದಿನಾಂಕ:21.05.2018**

**ಸುತ್ತೋಲೆ –02**

**ಇವರಿಗೆ :**

**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ**

**ಮುಖ್ಯಕಾರ್ಯನಿರ್ವಾಹಕರುಗಳಿಗೆ,**

**ಮಾನ್ಯರೇ,**

**ವಿಷಯ : ಸೌಹಾರ್ದ ಸಹಕಾರಿಯಲ್ಲಿ ಅಳವಡಿಸಿರುವ ತಂತ್ರಜ್ಞಾನದ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳ ಮಾಹಿತಿ ಸಲ್ಲಿಸುವ ಕುರಿತು.**

*******

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಿಂದ, ಸೌಹಾರ್ದ ಸಹಕಾರಿಯಲ್ಲಿ ಅಳವಡಿಸಿರುವ ತಂತ್ರಜ್ಞಾನದ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಉದ್ದೇಶಿಸಲಾಗಿದ್ದು, ಸಂಬಂಧಿಸಿದ ನಮೂನೆಗಳಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಕಳುಹಿಸುವ ಮೂಲಕ ಈ ಕಾರ್ಯಕ್ಕೆ ಸಹಕರಿಸಲು ಕೋರಿದೆ.

**ತಂತ್ರಜ್ಞಾನ ಅಳವಡಿಕೆ :** ಪ್ರಸಕ್ತ ಸನ್ನಿವೇಶದಲ್ಲಿ ಬಹುತೇಕ ಆರ್ಥಿಕ ಸಂಸ್ಥೆಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಗತಿ ಹೊಂದುತ್ತಿರುವುದು ತಮಗೆ ತಿಳಿದಿದೆ. ಸಹಕಾರ ಕ್ಷೇತ್ರದಲ್ಲಿ ಬದಲಾವಣೆಯ ಶಕೆಯನ್ನು ಆರಂಭಿಸಿರುವ ಶ್ರೇಯಸ್ಸು ಸೌಹಾರ್ದ ಸಹಕಾರಿಗಳದ್ದಾಗಿದ್ದು, ತಂತ್ರಜ್ಞಾನ ಅಳವಡಿಕೆಯಲ್ಲಿ ಕೂಡ ಸೌಹಾರ್ದ ಸಹಕಾರಿಗಳು ಮುಂದೆ ಇರುವುದನ್ನು ಗಮನಿಸಲಾಗಿದೆ. ತಂತ್ರಜ್ಞಾನ ಅಳವಡಿಕೆಯ ಕುರಿತಂತೆ ಸಂಯುಕ್ತ ಸಹಕಾರಿ ಕೂಡ ತಂತ್ರಜ್ಞಾನ ಮೇಳ, ತರಬೇತಿಯಲ್ಲಿ ವಿಷಯ ಅಳವಡಿಕೆ, ಕಾಮನ್ ಸಾಫ್ಟ್‌ವೇರ್, ವೆಬ್ ಪೇಜ್ ಇತ್ಯಾದಿಗಳ ಮೂಲಕ ಸೌಹಾರ್ದ ಸಹಕಾರಿಗಳಲ್ಲಿ ಅರಿವನ್ನು ಬೆಳೆಸುವ ಕಾರ್ಯ ಮಾಡುತ್ತಿದೆ. ಪ್ರಸ್ತುತ ಸೌಹಾರ್ದ ಸಹಕಾರಿಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಮಾಹಿತಿಯನ್ನು ಹೊಂದುವ ಉದ್ದೇಶದಿಂದ **ನಮೂನೆ – 01** ನ್ನು ತಮಗೆ ಕಳುಹಿಸಲಾಗುತ್ತಿದ್ದು, ಸದರಿ ನಮೂನೆಯನ್ನು ದಿನಾಂಕ: 11–06–2018 ರೊಳಗಾಗಿ ಭರ್ತಿ ಮಾಡಿ ಕಳುಹಿಸಲು ಕೋರಿದೆ.

**ಸಾಮಾಜಿಕ ಕಾರ್ಯಚಟುವಟಿಕೆಗಳು :** ಸೌಹಾರ್ದ ಸಹಕಾರಿಗಳು ಕೇವಲ ಆರ್ಥಿಕ ಉದ್ದಿಮೆಗಳಾಗದೆ, ಸಹಕಾರ ತತ್ವದ ಏಳನೆ ಅಂಶವಾದ ಸಾಮಾಜಿಕ ಬದ್ದತೆಯನ್ನು ಕೂಡ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ.

ಆದರೆ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಪ್ರಚಾರದ ಕೊರತೆಯಿಂದಾಗಿ ಸಮಾಜದ, ಸರ್ಕಾರದ ಗಮನ ಸೆಳೆಯಲು ಸಾಧ್ಯವಾಗುತ್ತಿಲ್ಲ. ಸೌಹಾರ್ದ ಸಹಕಾರಿಗಳು ತಮ್ಮ ಹಣಕಾಸಿನ ವ್ಯವಹಾರಗಳ ನಡುವೆಯು ಮಾಡಿರಬಹುದಾದ – ರಕ್ತದಾನ ಶಿಬಿರ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ, ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು, ನೆರೆ ಸಂತ್ರಸ್ಥರಿಗೆ ಪರಿಹಾರ, ಯೋಧರಿಗೆ ಸನ್ಮಾನಿಸುವುದು, ಸ್ವಂತ ಉದ್ಯೋಗಕ್ಕೆ ಪ್ರೋತ್ಸಾಹ, ಸ್ವಚ್ಛತಾ ಅಭಿಯಾನಗಳಂತಹ ಇನ್ನೂ ಅನೇಕ ಸಮಾಜಮುಖಿ ಕಾರ್ಯಗಳ ಕೇಂದ್ರೀಕೃತ ಮಾಹಿತಿ ಲಭ್ಯವಿಲ್ಲ. ಇಂತಹ ಅನೇಕ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಸಂಯುಕ್ತ ಸಹಕಾರಿಯು ಉದ್ದೇಶಿಸಿದ್ದು, **ನಮೂನೆ – 02** ನ್ನು ತಮಗೆ ಕಳುಹಿಸಲಾಗುತ್ತಿದೆ. ಸದರಿ ನಮೂನೆಯನ್ನು ದಿನಾಂಕ: 11-06-2018 ರೊಳಗಾಗಿ ಭರ್ತಿ ಮಾಡಿ ಕಳುಹಿಸಲು ಕೋರಿದೆ.

ವಿವಿಧ ತಂತ್ರಜ್ಞಾನ ಸಂಬಂಧಿತ ಸೇವಾ ಸಂಸ್ಥೆಗಳು ನಿರಂತರವಾಗಿ ಸಂಯುಕ್ತ ಸಹಕಾರಿಯನ್ನು ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಂಪರ್ಕಿಸುತ್ತಿರುತ್ತವೆ. ಅಲ್ಲದೆ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಪರವಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಹಾಗೂ ಬೇರೆ ಬೇರೆ ಸಂಸ್ಥೆಗಳು, ಇಲಾಖೆಗಳೊಂದಿಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದಿಂದಾದ ಸಾಮಾಜಿಕ ಕಾರ್ಯಗಳ ಮಾಹಿತಿ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ತಂತ್ರಜ್ಞಾನ ಅಳವಡಿಕೆಯ ಮಾಹಿತಿಗಳು ಉಪಯುಕ್ತವೆನಿಸುತ್ತವೆ. ಆದಕಾರಣ, ಸಂಬಂಧಿಸಿದ ನಮೂನೆಗಳನ್ನು ಭರ್ತಿ ಮಾಡಿ ಕಳುಹಿಸುವ ಮೂಲಕ ಮಾಹಿತಿ ಒದಗಿಸಲು ಕೋರಿದೆ.

**ವಂದನೆಗಳೊಂದಿಗೆ,**

**ಸಹಿ/–**

**(ಶರಣಗೌಡ ಜಿ ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕ**